**9 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ,**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.**

**ಎಸ್.ಸಿ.ನಂ.123/2018 C/W ಎಸ್.ಸಿ.ನಂ.102/2019**

**(ಚಾ.ಸಾ.19/ಪ್ರಾ.ಸಾ.15)**

ತಾಃ 10.06.2025 ರಂದು ಸಾಕ್ಷಿಗೆ ಪ್ರಮಾಣ ವಚನ ಮಾಡಿಸಲಾಯಿತು.

| | |
|---|---|
| ಸಾಕ್ಷಿದಾರರ ಹೆಸರು: | ಶಿವಚಂದ್ರಪ್ಪ |
| ತಂದೆಯ ಹೆಸರು | ಮುನಿವೆಂಕಟಪ್ಪ |
| ವಯಸ್ಸು | 49 ವರ್ಷ |
| ಉದ್ಯೋಗ | ಆರಕ್ಷಕ ಸಹಾಯಕ ನಿರೀಕ್ಷಕರು,<br>ಎಲೆಕ್ಟ್ರಾನಿಕ್ ಸಿಟಿ ಸಂಚಾರ ಪಿಎಸ್ |
| ವಾಸ ಸ್ಥಳ | ಬೆಂಗಳೂರು |

**ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ**

ನಾನು 2013 ರಿಂದ 2021 ರವರೆಗೆ ಎಲೆಕ್ಟ್ರಾನಿಕ್ ಸಿಟಿ ಪೊಲೀಸ್ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸಿದ್ದೇನೆ. ಈ ಪ್ರಕರಣಕ್ಕೆ ಸಂಬಂಧಿಸಿದಂತೆ ನಮ್ಮ ತನಿಖಾಧಿಕಾರಿಗೆ ಬಾತ್ಮೀದಾರರಿಂದ ಒಂದು ಮಾಹಿತಿ ಬಂದ ಮೇರೆಗೆ ನನ್ನನ್ನು, ಚಾಸಾ.18, 20 ಮತ್ತು 21 ರವರನ್ನು ಆರೋಪಿಗಳ ಪತ್ತೆಗಾಗಿ ನೇಮಿಸಿದ್ದು ಅದರಂತೆ ನಾವು ದಿಃ15.01.2017 ರಂದು ಬಸವನಪುರ ಗ್ರಾಮಕ್ಕೆ ಸಂಜೆ 6.00 ಗಂಟೆಗೆ ಹೋಗಿ ಬಸ್ ನಿಲ್ದಾಣದ ಬಳಿ 3 ಜನ ಆರೋಪಿಗಳು ನಿಂತಿದ್ದು ಅವರನ್ನು ನಾವು ಸುತ್ತುವರೆದು ಹಿಡಿದು

ಅವರು ಹೆಸರು ಮತ್ತು ವಿಳಾಸಗಳನ್ನು ಕೇಳಿ ತಿಳಿದುಕೊಂಡು ಪೊಲೀಸ್ ಠಾಣೆಗೆ ಕರೆದುಕೊಂಡು ಬಂದು ತನಿಖಾಧಿಕಾರಿಯ ಮುಂದೆ ಹಾಜರುಪಡಿಸಿರುತ್ತೇವೆ. ಸದರಿ ಆರೋಪಿಗಳು 1 ರಿಂದ 3 ನೇ ಆರೋಪಿಗಳು ಆಗಿದ್ದು, ನ್ಯಾಯಾಲಯದ ಮುಂದೆ ಇದ್ದಾರೆ. ಈ ಬಗ್ಗೆ ನಾನು ಹೇಳಿಕೆ ನೀಡಿದ್ದೇನೆ.

**<u>ವಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಎ ಟಿ ವಕೀಲರಿಂದಃ</u>**

2. ಆರೋಪಿಗಳ ಚಹರೆಯನ್ನು ತನಿಖಾಧಿಕಾರಿ ನನಗೆ ನೀಡಿರಲಿಲ್ಲ. ಆರೋಪಿಗಳ ಪತ್ತೆಗಾಗಿ ಸಾಮಾನ್ಯ ಡೈರಿಯಲ್ಲಿ ಬರೆದು ಹೋಗಿರಲಿಲ್ಲ. ನಾವು ನಮ್ಮ ಇಲಾಖಾ ವಾಹನದಲ್ಲಿ ಹೋಗಿದ್ದೇವು. ಅದರ ಸಂಖ್ಯೆ ಕೆಎ-01/ಜಿ-4640 ಆಗಿರುತ್ತದೆ. ಈ ಬಗ್ಗೆ ಹೇಳಿಕೆಯಲ್ಲಿ ಹೇಳಿಲ್ಲ. ಬಸ್ ನಿಲ್ದಾಣದಲ್ಲಿ ಸಾಮಾನ್ಯವಾಗಿ ಜನರು ಇರುತ್ತಾರೆ ಎಂದರೆ ಸರಿ. ನಾವು ಹಿಡಿದುಕೊಂಡ ವ್ಯಕ್ತಿಗಳು ಆರೋಪಿತರು ಎಂದು ಹೇಳಲು ನಮ್ಮ ಬಳಿ ಗುರುತೀನ ದಾಖಲೆಗಳು ಇರಲಿಲ್ಲ. ಆ ಜಾಗದಲ್ಲಿ ಮಹಜರ್ ಮಾಡಿಲ್ಲ. ನಾವು ಬಸವನಪುರಕ್ಕೆ ಹೋಗಿಲ್ಲ, ಆರೋಪಿಗಳನ್ನು ಹಿಡಿದಿಲ್ಲ ಎಂದರೆ ಸುಳ್ಳು. ಆರೋಪಿಗಳ ಅಂಗ ಶೋಧನೆ ಮಾಡಲಿಲ್ಲ. ನಾವು ಆರೋಪಿತರನ್ನು ಅವರ ಮನೆಯಿಂದ ಕರೆದುಕೊಂಡು ಬಂದು ಈ ಕೇಸಿಗೆ ಒಳಪಡಿಸಿದ್ದೇವೆ ಎಂದರೆ ಸುಳ್ಳು. ನಮ್ಮ ಮೇಲಾಧಿಕಾರಿಗಳ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಮೇಲ್ಕಂಡ ವಾಟೀ ಸವಾಲನ್ನು ಉಳಿದ ಆರೋಪಿ ಪರ ವಕೀಲರು ಅಳವಡಿಸಿಕೊಳ್ಳುವುದಾಗಿ ನುಡಿದಿದ್ದಾರೆ.**

**ಮರುವಿಚಾರಣೆಃಇಲ್ಲ.**

(ಮೇಲ್ಕಂಡ ಸಾಕ್ಷವನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಿದೆ.)

ಓ. ಹೇ. ಕೇ. ಸ. ಸಹಿ ಮಾಡಿದ್ದಾರೆ.

(ವಿಜಯ್ ಕುಮಾರ್)
9ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು.